ದಿನಾಂಕಃ **27-08-2024** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ 1 ಮತ್ತು 7 ಪರ ವಕೀಲರಿಂದ,**

1) ನನ್ನ ತಾಯಿಯ ಹೆಸರು ಪಾರ್ವತಮ್ಮ. ಸದರಿಯವರು ಈ ದಾವೆಯಲ್ಲಿ 2 ನೇ ವಾದಿ ಆಗಿರುತ್ತಾರೆ. ಪ್ರತಿವಾದಿ 1 ರವರು ನನ್ನ ಅಜ್ಜಿ. ನನ್ನ ತಾಯಿ ಗೌರಮ್ಮರವರ ತಂಗಿ ಎಂದರೆ ಸರಿ. ನಾನು ರಾಮೇಗೌಡರ ಹಿರಿಯ ಹೆಂಡತಿಯ ಮಗಳ ಮಗ ಎಂದರೆ ಸರಿ. ನನಗೆ 49 ವರ್ಷ ವಯಸ್ಸು ಆಗಿರುತ್ತದೆ. ನಾನು ಮೈಸೂರಿನಲ್ಲಿ ವಾಸವಾಗಿರುತ್ತೇನೆ. 1 ನೇ ಪ್ರತಿವಾದಿ ತಂದೆ ನನ್ನ ತಾಯಿಗೆ ಕೆಲವೊಂದು ಆಸ್ತಿಗಳನ್ನು ನೀಡಿದ್ದರು ಎಂದರೆ ಸರಿ. ವಾದಿ ಮತ್ತು ಪ್ತಿವಾದಿಗಳ ಕುಟುಂಬದಲ್ಲಿ 1983 ನೇ ಸಾಲಿನಲ್ಲಿ ವಿಭಾಗ ಆಗಿರುತ್ತದೆ ಸಾಕ್ಷಿಯು ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ವಿಭಾಗ ವಾದ ನಂತರ ರಾಮೇಗೌಡರವರು ಚೌಕಹಳ್ಳಿಯಲ್ಲಿ ಬಂದು ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಗೆ ವಿಭಾಗದಲ್ಲಿ ಬಂದ ಆಸ್ತಿಗಳನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2) ಸರ್ವೇ ನಂ. 150 ರಲ್ಲಿ 10 ಗುಂಟೆ, ಸರ್ವೇ ನಂ. 71/6 ರಲ್ಲಿ 13 ಗುಂಟೆ ಮತ್ತು ಸರ್ವೇ ನಂ. 131/ಡಿ 30 ಗುಂಟೆ ಆಸ್ತಿಯನ್ನು ನನ್ನ ತಾಯಿಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ವಿಭಾಗ ಆದ ನಂತರ ಕೆಲವೊಂದು ಆಸ್ತಿಗಳನ್ನು ಪ್ರತಿವಾದಿಗಳು ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು 2 ನೇ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದೇನೆ ಎಂದರೆ ಸರಿಯಲ್ಲ. ನನಗೆ 1983 ರಲ್ಲಿ 10 ವರ್ಷ ವಯಸ್ಸಾಗಿತ್ತು.

**ಪಾಟೀ ಸವಾಲುಃ ಪ್ರತಿವಾದಿ 5 ರವರ ಪರ ವಕೀಲರಿಂದ,**

1) ರಾಮೇಗೌಡರ ಇಬ್ಬರು ಪತ್ನಿಯರ ನಡುವೆ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ದಿಃ 15/11/1981 ರಲ್ಲಿ ಇಬ್ಬರ ನಡುವೆ ವಿಭಾಗ ಆಗಿರುತ್ತದೆ ಎಂದರೆ

ಸರಿಯಲ್ಲ. ನಾನು ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿಯನ್ನು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ